ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

## ಸೆಷನ್ಸ್ ಕೇಸ್ ನಂಬ್ರ 34/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪ್ರಭಾಕರ ಬಂಗೇರ | ಪ್ರಾಸಾಃ 18 |
| ಗಂಡನ ಹೆಸರು | : | ದೇವಪ್ರಸಾದ್ ಬಂಗೇರ | ಚಾಸಾಃ 25 |
| ಪ್ರಾಯ | : | 52 ವರ್ಷ | ದಿನಾಂಕಃ **08.11.2022** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ವ್ಯಾಪಾರ | |
| ವಾಸಸ್ಥಳ | : | ಉಳ್ಳಾಲ, ಮಂಗಳೂರು. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ದಿನಾಂಕ 21.12.2008 ರಂದು ನಾನು ಬೆಳಿಗ್ಗೆ 8.00 ಗಂಟೆಗೆ ಉಳ್ಳಾಲ ದೇವಸ್ಥಾನಕ್ಕೆ ಹೋಗಿದ್ದೆನು. ಅಲ್ಲಿಂದ ವಾಪಾಸು ಬರುವಾಗ ಉಳ್ಳಾಲ ಪೊಲೀಸ್ ಠಾಣೆಯ ಎದುರು ರಿಕ್ಷಾ ಚಾಲಕ ತಾರಾನಾಥ ಎಂಬುವವರ ಜೊತೆ ಉಳ್ಳಾಲ ಪೊಲೀಸ್ ಠಾಣೆಯ ಪೊಲೀಸರಾದ ಸೀತಾರಾಮರವರು ಮಾತನಾಡುತ್ತಿದ್ದರು. ನನಗೆ ತಾರಾನಾಥರವರ ಪರಿಚಯ ಇದ್ದುದರಿಂದ ಏನು ವಿಷಯ ಎಂದು ಕೇಳಲು ಬೈಕನ್ನು ನಿಲ್ಲಿಸಿದೆನು. ಆಗ ಪೊಲೀಸರು ಭಯೋತ್ಪಾದಕ ಕೇಸಿನಲ್ಲಿ ನಾವು ಒಬ್ಬನನ್ನು ಹಿಡಿದಿರುತ್ತೇವೆ, ನೀವು ಈ ವಿಚಾರದಲ್ಲಿ ನಮಗೆ ಸಹಕರಿಸಬೇಕು ಎಂದು ತಿಳಿಸಿದರು. ತಾರಾನಾಥರವರು ಬರುತ್ತೇನೆ ಎಂದು ಒಪ್ಪಿಕೊಂಡಂತೆ ನಾನೂ ಸಹ ಒಪ್ಪಿಕೊಂಡೆನು. ಆಗ ಅವರು ನಮ್ಮನ್ನು ಪೊಲೀಸ್ ಠಾಣೆಗೆ ಬರಲು ತಿಳಿಸಿದರು. ನಾವಿಬ್ಬರೂ ಒಟ್ಟಿಗೆ ಪೊಲೀಸ್ ಠಾಣೆಗೆ ಹೋದೆವು. ಅಲ್ಲಿಗೆ ಹೋದಾಗ ಡಿ.ವೈ.ಎಸ್.ಪಿ. ರವರಾದ

ಜಯಂತ್ ಶೆಟ್ಟಿ ಮತ್ತು ಮಹಮ್ಮದ್ ನೌಶಾದ್ ಇದ್ದರು. ಜಯಂತ್ ಶೆಟ್ಟರವರು ಮಹಮ್ಮದ್ ನೌಶಾದ್ ಎಂಬುವವನು ಭಯೋತ್ಪಾದಕ ಕಾರ್ಯಕ್ಕೆ ಬೇಕಾದ ಸಾಮಾನುಗಳನ್ನು ಒಂದು ಕಡೆ ಬಚ್ಚಿಟ್ಟಿರುವುದಾಗಿ ನಮ್ಮಲ್ಲಿ ಹೇಳಿರುತ್ತಾನೆ, ಅದಕ್ಕೆ ನೀವೆಲ್ಲರೂ ಬಂದು ನಮಗೆ ತನಿಖೆಗೆ ಸಹಕರಿಸಬೇಕು ಎಂದು ವಿನಂತಿಸಿಕೊಂಡರು. ಅದಕ್ಕೆ ನಾನು ಮತ್ತು ತಾರಾನಾಥರವರು ಒಪ್ಪಿಕೊಂಡೆವು.

2. ಅಲ್ಲಿಂದ ನಾನು, ತಾರಾನಾಥ, ಮಹಮ್ಮದ್ ನೌಶಾದ್, ಪೊಲೀಸ್ ಜಯಂತ್ ಶೆಟ್ಟಿಯವರು ಮತ್ತು ಸಿಬ್ಬಂದಿಗಳು ಒಟ್ಟಿಗೆ ಜಪ್ಪು ಮಾರ್ಕೇಟ್ - ಬೋಳಾರಕ್ಕೆ ಹೋದೆವು. ಹಾಗೆ ಹೋಗಿ ಲೀವೆಲ್ ನಲ್ಲಿ ಇಲಾಖಾ ವಾಹನ ನಿಲ್ಲಿಸಲು ಹೇಳಿದರು. ಅಲ್ಲಿಂದ ನಾವು 15 ಅಡಿ ದೂರದ ವರೆಗೆ ನಡೆದುಕೊಂಡು ಹೋಗಿ ಒಂದು 3 ಮಹಡಿಯ ಕಟ್ಟಡದ ಮೂರನೇ ಮಹಡಿಯ ಒಂದು ರೂಮಿಗೆ ಹೋದೆವು. ಅಲ್ಲಿ ಬೀಗ ಹಾಕಲಾಗಿತ್ತು. ಜಯಂತ್ ಶೆಟ್ಟಿಯವರು ಅದರ ಬಾಗಿಲನ್ನು ಒಡೆಯಲು ಸಾಮಾನು ತರಿಸಿ ಬಾಗಿಲನ್ನು ಮುರಿದು ರೂಮಿನೊಳಗೆ ಹೋದೆವು. ಅದರ ಒಳಗೆ ಒಂದು ಕೊಠಡಿ, ಬಾತ್ ರೂಮ್ ಇದ್ದು, ಒಳಗಿನ ಪಶ್ಚಿಮದ ಭಾಗದಲ್ಲಿ ಒಂದು ರಟ್ಟಿನ ಬಾಕ್ಸ್ ಇತ್ತು.

3. ನೌಶಾದ್ ನು ರಟ್ಟಿನ ಬಾಕ್ಸ್ ನ್ನು ತೆರೆದು ಅದರಲ್ಲಿದ್ದ 25 ರಿಂದ 28 ವಸ್ತುಗಳನ್ನು ನಮಗೆ ತೋರಿಸಿದನು. ಅದರಲ್ಲಿ 6 ಟೈಮರ್ ಗಳು, ಒಂದು ವಾಚ್ ನ ಬೆಲ್ಟ್ ರೀತಿಯಲ್ಲಿ ಇದ್ದು, ಅದರಲ್ಲಿ ಪೆನ್ ಡ್ರೈವ್ ಇತ್ತು. ಸದ್ರಿ ಕಟ್ಟಡಕ್ಕೆ ಸಂಬಂಧಪಟ್ಟ

ಅವರ ತಾಯಿ ತಿಂಗಳಿಗೆ ರೂ.3,000/- ಗಳಂತೆ ಅಬ್ದುಲ್ ರಹಿಮಾನ್ ರವರಿಗೆ ಮಾಡಿದ್ದ ಬಾಡಿಗೆ ಕರಾರುಪತ್ರ, ನೌಶಾದ್ ನು ಮುಕ್ಕಚ್ಚೇರಿಯ ಎಲಿಯಾಸ್ ರವರಿಗೆ ರೂ.13,00,000/- ಗಳಿಗೆ ಮಾಡಿಕೊಂಡಿದ್ದ ಕರಾರುಪತ್ರ, ವರಮಾನ ತೆರಿಗೆಯ ದಾಖಲೆ, ಪಾನ್ ಕಾರ್ಡ್, ಫೋಟೋ, ಕಾಲೇಜಿನ 10 ಐ.ಡಿ. ಕಾರ್ಡ್ ಗಳು, ಅದೇ ಕಾಲೇಜಿನ ಲೈಬ್ರೇರಿಯ ಐ.ಡಿ. ಕಾರ್ಡ್ ಗಳು, ಬೇರೆಯವರ ಎಲೆಕ್ಟ್ರಾನಿಕ್ ಇಂಜಿನಿಯರಿಂಗ್ ಐ.ಡಿ. ಕಾರ್ಡ್, ನೌಶಾದ್ ನ ಹೀರೋ ಹೊಂಡಾ ಬೈಕಿನ ಆರ್.ಸಿ. ಯ ಜೆರಾಕ್ಸ್ ಪ್ರತಿ, ಶಾಲಿನಿ ಎನ್ನುವವರ ಮಾರುತಿ 800 ಕಾರಿನ ಎನ್.ಓ.ಸಿ., 6 ಟೈಮರ್ ಗಳಿಗೆ ಕನೆಕ್ಷನ್ ಯಾವ ರೀತಿ ಕೊಡಬೇಕೆಂಬ ಒಂದು ನೋಟ್ ಬುಕ್, ಜಿಹಾದ್ ಗೆ ಸೇರಿದ ಇಂಗ್ಲೀಷ್ ಪುಸ್ತಕ, ಒಂದು ಸಣ್ಣ ಪುಸ್ತಕ - ಅದರಲ್ಲಿ ಮಹಮ್ಮದ್ ನೌಶಾದ್ ನ ಮೊಬೈಲ್ ನಂಬ್ರ ಮತ್ತು ಪುಸ್ತಕಗಳನ್ನು ತೆಗೆದುಕೊಳ್ಳಲು ಯಾರು ಯಾರಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದೇನೆ ಎಂಬ ವಿವರ, ನೌಶಾದ್ ನ ಪಾಸ್ ಪೋರ್ಟ್ ಪ್ರತಿ, ಮಹಮ್ಮದ್ ಅಲಿಯ ಲರ್ನಿಂಗ್ ಲೈಸೆನ್ಸ್, ಬೇರೆ ಬೇರೆಯವರ ಐ.ಡಿ. ಕಾರ್ಡ್ ಗಳು ಮತ್ತು ಲೈಸೆನ್ಸ್ ಗಳು ಇದ್ದವು. ಜಯಂತ ಶೆಟ್ಟಿ ಯವರು ಬೇರೆಯವರ ಮುಖಾಂತರ ಲ್ಯಾಪ್ ಟಾಪ್ ತರಿಸಿ ಪೆನ್ ಡ್ರೈವ್ ಹಾಕಿದರು. ಆಗ ಅದರಲ್ಲಿ ಅರೇಬಿಕ್ ಭಾಷೆಯಲ್ಲಿ ಮತ್ತು ರೋಮನ್ ಅಂಕೆಯಲ್ಲಿ ಬರೆದಿದ್ದರು. 75 ರಿಂದ 100 ರ ವರೆಗೆ ಬಾಂಬು, ಪಟಾಕಿ, ಬಿಲ್ಲುಬಾಣದ ಚಿತ್ರ ಗಳು ತಲೆಬುರುಡೆ, ಹೆಬ್ಬೆಟ್ಟು, ಕನ್ನಡಕ, ಗಣಪತಿ ಮಂಡಲ ಪತ್ರ ಗಳು ಇದ್ದವು. ಅಲ್ಲಿ ಸುಮಾರು 75 ರಿಂದ 100 ವಸ್ತುಗಳು ಇದ್ದು, ಪೊಲೀಸರು ಅವುಗಳನ್ನು ಮಹಜರು ತಯಾರಿಸಿ ಅಮಾನತ್ತುಪಡಿಸಿಕೊಂಡರು. ಸದ್ರಿ

ಮಹಜರನ್ನು ಸಾಕ್ಷಿ ಗುರುತಿಸಿದ್ದು, ಅದು ನಿಶಾನೆ ಪಿ-29 ರಲ್ಲಿ ಇದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-29(ಬಿ) ಎಂದು ಗುರುತಿಸಲಾಯಿತು. ಸದ್ರಿ ಮಹಜರಿಗೆ ನಾನಲ್ಲದೇ ತಾರಾನಾಥ, ಆರೋಪಿ ನೌಶಾದ್ ಮತ್ತು ಡಿ.ವೈ.ಎಸ್.ಪಿ. ರವರು ಸಹಿ ಮಾಡಿರುತ್ತಾರೆ. ಆ ದಿನ ಅಮಾನತ್ತುಪಡಿಸಿಕೊಂಡಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

4. ಟೈಮರ್ ಗಳನ್ನು ಮುಮಾ-131, ವಾಚ್ ನ ಬೆಲ್ಟ್ ರೀತಿ ಇರುವ ಪೆನ್ ಡ್ರೈವ್ ನ್ನು ಮುಮಾ-132, (ಮೊದಲಿನ ಕೇಸಿನಲ್ಲಿ ನೀಡಿದ ನಂಬರನ್ನೇ ಇಲ್ಲಿ ಅಳವಡಿಸಿಕೊಳ್ಳಲಾಗಿದೆ.) ಒಂದು ಬಿಳಿ ಪ್ಲಾಸ್ಟಿಕ್ ಕವರಿನಲ್ಲಿರುವ 2 ಬಾಡಿಗೆ ಕರಾರುಪತ್ರ ಗಳ ಜೆರಾಕ್ಸ್ ಪ್ರತಿಗಳು, ನೌಶಾದ್ ನ ಪಾಸ್ ಪೋರ್ಟಿನ ಜೆರಾಕ್ಸ್ ಪ್ರತಿ, ಮಾಪುಸಾ ಯಾಸಿಮ್ ಎಂಬುವವರ ಪಾಸ್ ಪೋರ್ಟಿನ ಜೆರಾಕ್ಸ್ ಪ್ರತಿ, ಕ್ರಯದ ಕರಾರಿನ ಜೆರಾಕ್ಸ್ ಪ್ರತಿ, ಜಪಾನ್ ಭಾಷೆಯಲ್ಲಿರುವ ಆ್ಯಂಗಲ್ ಗ್ರೆಂಡರ್ ಎಂಬ ಚಿಕ್ಕ ಪುಸ್ತಕವನ್ನು ಆಕ್ಷೇಪಣೆಗೆ ಒಳಪಟ್ಟು, ನಿಶಾನೆ ಪಿ-30 ರಿಂದ ನಿಶಾನೆ ಪಿ-34 ಎಂದು ಗುರುತಿಸಲಾಯಿತು. ಕ್ರಮ ಸಂಖ್ಯೆ 10 ರಲ್ಲಿದ್ದ ಚಾರ್ಟನ್ನು ಮುಮಾ-133, ಕ್ರಮ ಸಂಖ್ಯೆ 11 ಮತ್ತು 12 ರಲ್ಲಿ ಕಾಣಿಸಿದ ರಾಜ್ ಗಂಗ್ ವಾಲ್ ಎಂಬುವವರ ಚುನಾವಣಾ ಆಯೋಗ ನೀಡಿದ ಗುರುತಿನ ಚೀಟಿಗಳನ್ನು ಮುಮಾ-134 ಮತ್ತು ಮುಮಾ-135, ಕ್ರಮಸಂಖ್ಯೆ 19 ರಲ್ಲಿ ಕಾಣಿಸಿದ ವಿನಯ್ ಕೃಷ್ಣ ಎಂಬ ವಿದ್ಯಾರ್ಥಿಯ ಐ.ಡಿ. ಕಾರ್ಡ್ ನ್ನು ಮುಮಾ-136, ಪ್ರವೀಣ್ ಪೂಜಾರಿ ಎಂಬುವವರ ಮೂಲ ಐ.ಡಿ. ಕಾರ್ಡ್ ನ್ನು

ಮುಮಾ-137, ಕ್ರಮ ಸಂಖ್ಯೆ 20 ರಲ್ಲಿ ಕಾಣಿಸಿದ ಕ್ರಯದ ಕರಾರುಪತ್ರದ ಜೆರಾಕ್ಸ್ ಪ್ರತಿಯನ್ನು ಆಕ್ಷೇಪಣೆಗೆ ಒಳಪಟ್ಟು ನಿಶಾನೆ ಪಿ-35 ಎಂದು ಗುರುತಿಸಲಾಯಿತು. ನೌಶಾದ್ ನ ಆದಾಯ ತೆರಿಗೆಯ ಮೂಲ ಪಾನ್ ಕಾರ್ಡ್ ನ್ನು ಮುಮಾ-138, ಆರೋಪಿ ಮಹಮ್ಮದ್ ನೌಶಾದ್ ನಿಗೆ ಸೇರಿದ ಲೈಬ್ರೆರಿಯ 2 ಕಾರ್ಡ್ ಗಳನ್ನು ಮುಮಾ-139 ಮತ್ತು ಮುಮಾ-140, ಆರೋಪಿ ಮಹಮ್ಮದ್ ನೌಶಾದ್ ನ ಪಿ.ಎ. ಇಂಜಿನಿಯರಿಂಗ್ ಕಾಲೇಜಿನ ಮೂಲ ಐ.ಡಿ. ಕಾರ್ಡ್ ನ್ನು ಮುಮಾ-141, ಆರೋಪಿ ಮಹಮ್ಮದ್ ನೌಶಾದ್ ನ ಡಿ.ಎಲ್. ನ ಮೂಲಪ್ರತಿ ಮುಮಾ-142, ನಿಪಿ-30 ರಿಂದ ನಿಪಿ-34 ಇದ್ದ ಪ್ಲಾಸ್ಟಿಕ್ ಕವರನ್ನು ಮುಮಾ-143 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ 10 ನೇ ಆರೋಪಿ ಪರ ವಕೀಲರಿಂದಃ</u>

5. ಪೊಲೀಸರು ನನಗೆ ಲಿಖಿತ ನೋಟೀಸನ್ನು ನೀಡಿಲ್ಲ. ನಾನು ಪೊಲೀಸರಿಗೆ ನನ್ನ ಹೇಳಿಕೆಯನ್ನು ನೀಡಿಲ್ಲ. ನಾನು ಯಾವುದೇ ಆರೋಪಿತರ ಮನೆಗೆ ಹೋಗಿಲ್ಲ ಅಂದರೆ ಸರಿಯಲ್ಲ. ನಾನು ಮಹಜರ್ ದಲ್ಲಿ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರು ನನ್ನ ಸಮ್ಮುಖದಲ್ಲಿ ಯಾವುದೇ ಮುದ್ದೆಮಾಲುಗಳನ್ನು ಅಥವಾ ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಪೊಲೀಸರು ನನ್ನ ಸಮ್ಮುಖದಲ್ಲಿ ಮಹಜರು ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಈ ಪ್ರಕರಣವನ್ನು ಹೊರುತುಪಡಿಸಿ ಬೇರೆ ಯಾವುದೇ ಕೇಸುಗಳಲ್ಲಿ ಸಾಕ್ಷಿ ನುಡಿದಿರುವುದಿಲ್ಲ. ನಾನು ಸಹಿ ಮಾಡಿದಾಗ ಮಹಜರ್ ದಲ್ಲಿ ಎಲ್ಲಾ ವಿಷಯಗಳನ್ನು ಬರೆಯಲಾಗಿತ್ತು. ನಾನು ಕೊನೆಯ ಪುಟದಲ್ಲಿ ಸಹಿ ಮಾಡಿದ್ದೇನೆ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

S.C.No.34/2020 PW-18
Date: 08.11.2022

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.